


**E-ISSN:** 2706-8927
**P-ISSN:** 2706-8919
www.allstudyjournal.com
IJAAS 2021; 3(4): 254-257
Received: 08-09-2021
Accepted: 12-10-2021

**ಡಾ. ಎಂ ಚಿಕ್ಕಣ್ಣ**
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು, ಕನ್ನಡ ಭಾಷಾ ವಿಭಾಗ, ಎಸ್.ಡಿ.ಯು.ಐ.ಎಂ., ದೊಡ್ಡಬಳ್ಳಾಪುರ, ಕರ್ನಾಟಕ, ಭಾರತ

**Corresponding Author:**
**ಡಾ. ಎಂ ಚಿಕ್ಕಣ್ಣ**
ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು, ಕನ್ನಡ ಭಾಷಾ ವಿಭಾಗ, ಎಸ್.ಡಿ.ಯು.ಐ.ಎಂ., ದೊಡ್ಡಬಳ್ಳಾಪುರ, ಕರ್ನಾಟಕ, ಭಾರತ

# ಯುವಕರು, ಮೌಢ್ಯತೆ ಮತ್ತು ವೈಜ್ಞಾನಿಕ ಮನೋಧರ್ಮ: ಭಿನ್ನ ಆಯಾಮಗಳು

**ಡಾ. ಎಂ ಚಿಕ್ಕಣ್ಣ**

**ಪೀಠಿಕೆ**

ಕೋವಿಡ್ ನಂತಹ ಕ್ಲಿಷ್ಟಕರವಾದ ಸಮಯದಲ್ಲಿ ಕೋವಿಡ್ ನ ನಿವಾರಣೆಗಾಗಿ ಪರಿಹಾರವನ್ನು ಕಂಡು ಹಿಡಿಯಬಲ್ಲ ವಿಜ್ಞಾನಿಗಳಿಗಾಗಿ ಜಗತ್ತೇ ಎದುರು ನೋಡುತ್ತಿತ್ತು. ಇಂತಹ ಸಂದರ್ಭಕ್ಕೆ ಒಗ್ಗಿ ಕೊಳ್ಳುವಂತೆ ಜಿ.ಎಸ್.ಶಿರುದ್ರಪ್ಪನವರು ತಮ್ಮ 'ಶ್ರೀ ವಿಜ್ಞಾನಿಗೆ' ಎಂಬ ಕವನದಲ್ಲಿ ವಿಜ್ಞಾನಿಗಳನ್ನು ತುಂಬಾ ಗೌರವದಿಂದ ಕಂಡಿರುವುದಕ್ಕೆ. ಅವರ ಕವನದ ಸಾಲುಗಳನ್ನು ನೋಡಬಹುದು ಆ ಸಾಲುಗಳು ಈ ರೀತಿ ಇವೆ:" "ಶ್ರೀ ವಿಜ್ಞಾನಿಗೆ ನಮೋ ನಮೋ

> ಪಾಚಿಗಟ್ಟಿರುವ ಮೌಢ್ಯವ ತೊಡೆವ
> ವಿಚಾರ ಶಕ್ತಿಯ ಹೊನಲನು ತರುವ
> ಅರಿವಿನ ಪರಿಧಿಯ ವಿಸ್ತರಿಸುವ
> ಶ್ರೀ ವಿಜ್ಞಾನಿಗೆ ನಮೋ ನಮೋ".

ಕೋವಿಡ್ ಮಹಾಮಾರಿಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಒಂದು ಕಡೆ ವಿಜ್ಞಾನಿಗಳು ಹರಸಾಹಸ ಪಡುತ್ತಿದ್ದರೆ ಇನ್ನೊಂದು ಕಡೆ ಕೋವಿಡ್ ಎಂಬ ರೋಗವನ್ನು ಹೋಗಲಾಡಿಸಲು "ಕೋರೋನಮ್ಮ" ಎಂಬ ದೇವರನ್ನು ಪೂಜಿಸುವ ಪರಿಯನ್ನು ಕಂಡಿದ್ದೇವೆ. ಹಿಂದಿನ ಕಾಲದ ಹಾಗೆ ಗಾಡಿಯಲ್ಲಿ ಓಡಾಡುತ್ತಿಲ್ಲ, ಬೈಸಿಕಲ್ಲು, ಬಸ್ಸು, ರೈಲು, ವಿಮಾನ ಇವು ನಮ್ಮ ವಾಹನಗಳು ಓದುವುದಕ್ಕೆ ರಾತ್ರಿ ವಿದ್ಯುತ್ ದೀಪ ಬಳಸುತ್ತೇವೆ ದೇಶದ ಸಮಾಚಾರವನ್ನೆಲ್ಲಾ ಬೆಳಗಾದರೆ ಆನ್ಲೈನ್ ರೇಡಿಯೋ, ಮೊಬೈಲ್ ಟಿ.ವಿ ಮೂಲಕ ಕೇಳುತ್ತೇವೆ ತಿಳಿಯುತ್ತೇವೆ. ಇವೆಲ್ಲ ಸಾಧ್ಯವಾಗಿರುವುದು ವಿಜ್ಞಾನದ ಸಾಧನೆಗಳಿಂದ ಹೀಗೆ ವಿಜ್ಞಾನ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿದೆ, ಭೂಮಿಯನ್ನು ಆದಿಶೇಷ ಎಂಬ ಸರ್ಪ ಹೊತ್ತು ಕೊಂಡಿದೆ ಎಂಟು ದಿಕ್ಕುಗಳಲ್ಲೂ ಎಂಟು ಆನೆಗಳು ಭೂಮಿಗೆ ಆಸರಿಯಾಗಿ ಬೆನ್ನುಕೊಟ್ಟು ನಿಂತಿವೆ ಮುಂತಾದ ಪುರಾಣಗಳು ಸಹ ನಮ್ಮಲ್ಲಿ ಕಾಣ ಸಿಗುತ್ತವೆ, ಆದರೆ ವಿಜ್ಞಾನ ಸೂರ್ಯನಿಗೆ ಇರುವ ಆಕರ್ಷಣ ಶಕ್ತಿಯಿಂದ ಭೂಮಿ ಸೂರ್ಯನನ್ನು ಸುತ್ತು ಹಾಕುತ್ತಿದೆ ಎಂದು ವಿಜ್ಞಾನ ತಿಳಿಸುತ್ತದೆ, ನಮಗೆ ಮನದಟ್ಟಾಗುವಂತೆ ತೋರಿಸಿದೆ ಇದನ್ನು ಬುದ್ಧಿ ಇರುವ ಎಲ್ಲರೂ ನಂಬುತ್ತೇವೆ ಹಾಗೆಯೇ ಇನ್ನೊಂದು ಗುಂಪು ಸೂರ್ಯನನ್ನು, ಚಂದ್ರನನ್ನು, ರಾಹು, ಕೇತು ಎಂಬ ಹಾವಿನ ರೂಪದ ರಾಕ್ಷಸರು ನುಂಗುತ್ತಾರೆ ಎಂದು ಗ್ರಹಣದ ಸಂದರ್ಭದಲ್ಲಿ ನಮ್ಮ ಜನ ಇನ್ನೂ ಹೇಳುತ್ತಿರುವುದು ಮೌಢ್ಯ ಮತ್ತು ನಂಬಿಕೆಗಳಿಗೆ ಸಾಕ್ಷಿ ಎನ್ನಬಹುದು.

ಪ್ರತಿಯೊಂದನ್ನು ವಿಚಾರ ಮಾಡಿ ಒಪ್ಪಿಕೊಳ್ಳುವ ಈ ಸಂದರ್ಭದಲ್ಲಿ ನಾವು ಈಗಲೂ ಸಹ ಮೂಢನಂಬಿಕೆಗಳ ಮೊರೆಹೋಗುತ್ತಿರುವುದು ವಿಪರ್ಯಾಸ, ಹಾಗಾಗಿ ಪ್ರತಿಯೊಂದನ್ನು ವಿಚಾರ ಮಾಡಿ ಒಪ್ಪಿಕೊಳ್ಳಬೇಕು ಇಲ್ಲದೆ ಹೋದರೆ ಅನೇಕ ರೀತಿಯ ಅಪಾಯಗಳು ಒದಗಿಬರಬಹುದ, ಇದಕ್ಕೆ ಸಂಬಂಧಿಸಿದಂತೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು "ವಿಜ್ಞಾನವನ್ನು ಬೇರೆಯವರು ಪ್ರಶ್ನಿಸುವ ಅಗತ್ಯವೇ ಇಲ್ಲ! ಏಕೆ ಅಂತ ಹೇಳಿದರೆ, ಪ್ರತಿ ಹೆಜ್ಜೆಯಲ್ಲೂ ವಿಜ್ಞಾನ ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಲೇ ವಿಕಾಸವಾಗುತ್ತಾ ಹೋಗುವಂಥದ್ದು." ಎಂದು ವಿಜ್ಞಾನದ ಅಪಾರ ಶಕ್ತಿಯನ್ನು ಕೊಂಡಾಡಿದ್ದಾರೆ. ಆಧುನಿಕ ಪ್ರಪಂಚವು ಇಂದು ವಿಜ್ಞಾನ ಮತ್ತು ತಂತ್ರಜ್ಞಾನಗಳ ಯುಗವೆನಿಸಿದೆ. ಆಹಾರ, ಗಾಳಿ, ನೀರಿನಷ್ಟೇ ಇಂದು ವಿಜ್ಞಾನ,ಮಾಹಿತಿ ತಂತ್ರಜ್ಞಾನ ಇತ್ಯಾದಿಗಳು ಅತ್ಯಂತ ಅವಶ್ಯಕವೆನಿಸಿವೆ. ಪ್ರಾಚೀನ ಕಾಲದಿಂದಲೂ ಜನರ ಜೀವನಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ನೆರವು

ದೊರೆಯುತ್ತಲೇ ಬಂದಿದೆ. ಮಾನವ ಇದುವರೆಗೆ ಅಜ್ಞಾತವಾಗಿದ್ದ ಎಷ್ಟೋ ವಿಷಯಗಳನ್ನು ಮತ್ತು ಪ್ರಕೃತಿಯಲ್ಲಿ ಅಡಗಿರಬಹುದಾದ ಸಮಸ್ತ ರಹಸ್ಯಗಳನ್ನು ಅನಾವರಣಗೊಳಿಸಲು ಬಹುಮಟ್ಟಿಗೆ ಶಕ್ತನಾಗಿದ್ದಾನೆ. ಒಂದೇ ಮಾತಿನಲ್ಲಿ ಹೇಳಬಹುದಾದರೆ ವಿಜ್ಞಾನಿಗಳಿಗೆ ಅಗೋಚರವಾದ ಅಥವಾ ಅವರ ಅರಿವಿಗೆ ಬಾರದಿರುವ ಕ್ಷೇತ್ರಗಳು ಅತ್ಯಂತ ಕಡಿಮೆ. ಭೂಮಿಯ ಎಲ್ಲ ಕೌತುಕಗಳಿಗೆ, ಸಮಸ್ಯೆಗಳಿಗೆ ವಿಜ್ಞಾನ ಪರಿಹಾರವನ್ನು ನೀಡೇ ನೀಡುತ್ತದೆ ಎನ್ನಲು ಅಸಾಧ್ಯ. ಆದರೆ ಎಲ್ಲ ವಿಷಯಗಳ ಬಗ್ಗೆ ವಿಜ್ಞಾನದ ಹುಡುಕಾಟ ನಡೆಯುತ್ತಲೇ ಇರುತ್ತದೆ. ಇದು ಅನಂತ.ಭಾರತದಲ್ಲಿಯೂ ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆ ಪ್ರಾಚೀನ ಕಾಲದಿಂದಲೂ ಪರಿಚಿತವಾದ ಕ್ಷೇತ್ರಗಳೇ ಆಗಿದೆ.ಮಾನವನ ಲೆಕ್ಕಾಚಾರಕ್ಕೆ ಅಡಿಪಾಯ ಕೊಟ್ಟಿದ್ದೇ ಸೊನ್ನೆಯ ಶೋಧನೆ. ಆರ್ಯಭಟ ಕೊಟ್ಟ ಈ ಶೂನ್ಯ ಸಂಖ್ಯೆಯ ಮೇಲೆಯೇ ಇವತ್ತಿನ ಸಂಖ್ಯಾಶಾಸ್ತ್ರ ನಿಂತಿದೆ. ಸ್ವಾತಂತ್ರ್ಯ ಬಂದ ಮೇಲೆ ಅನೇಕ ಸಂಶೋದನಾ ಕೇಂದ್ರಗಳನ್ನು ಹಾಗೂ ಆ ವಿಷಯಗಳಲ್ಲಿ ತಂತ್ರಜ್ಞಾನವನ್ನು ಕೊಡುವ ಶಿಕ್ಷಣ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ವಿಜ್ಞಾನ,ತಂತ್ರಜ್ಞಾನ ಕ್ಷೇತ್ರ ಅಭಿವೃದ್ಧಿ ಸಾಧಿಸಿದೆ. ನೈಸರ್ಗಿಕ ವಿಜ್ಞಾನ ಮತ್ತು ತಂತ್ರಜ್ಞಾನ, ವ್ಯವಸಾಯ, ಪರಮಾಣು ಸಂಶೋಧನೆ, ಬಾಹ್ಯಾಕಾಶ ಸಂಶೋಧನೆ ಹಾಗೂ ರಕ್ಷಣಾ ಕ್ಷೇತ್ರ ಮುಂತಾದುವುಗಳ ಸಂಶೋಧನೆಯಲ್ಲಿ ಭಾರತೀಯರು ಅಪಾರವಾದ ಯಶಸ್ಸನ್ನು ಗಳಿಸಿದ್ದಾರೆ. ಈ ದಿಸೆಯಲ್ಲಿ ಪ್ರಯತ್ನ ಸತತವಾಗಿ ಮುಂದುವರಿಯುತ್ತಿದೆ. ಹಲವು ಕ್ಷೇತ್ರಗಳಲ್ಲಿ ಭಾರತವಿನ್ನೂ ಕೆಲಮಟ್ಟಿಗೆ ಪರಾವಲಂಬಿಯೇ ಎನ್ನಬಹುದು,ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ವೈಜ್ಞಾನಿಕ ಸಂಶೋಧನಾ ಕೇಂದ್ರಗಳನ್ನು ಹೊಂದಿವೆ. ಇವೆಲ್ಲವೂ ದೇಶವನ್ನು ಅಭಿವೃದ್ದಿ ಪಥದಲ್ಲಿ ಕೊಂಡೊಯ್ಯಲು ಸಹಕರಿಸುತ್ತಿವೆ. ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ಪರಾವಲಂಬಿಗಳಾಗದೆ ದೇಶದ ವೈಜ್ಞಾನಿಕ ತಂತ್ರಜ್ಞಾನದ ಅಗತ್ಯಗಳನ್ನು ಪೂರೈಸುವಷ್ಟೂ ಸಾಮರ್ಥ್ಯ ಪಡೆಯುವುದೇ ಭಾರತದ ಮುಖ್ಯ ಗುರಿಯಾಗಿದೆ. ವಿಜ್ಞಾನಿಗಳ ಎಲ್ಲ ಚಿಂತನೆಗಳೂ ಸಂಶೋಧನೆಯ ಫಲಗಳೂ ದೇಶದ ಜನಸಾಮಾನ್ಯರ ಬದುಕಿನಲ್ಲಿ ಬೀರಬೇಕಾದಷ್ಟು ಪರಿಣಾಮ ಬೀರಿದೆಯೇ ಎಂಬುದು ಪ್ರಶ್ನೆಯಾಗಿ ಉಳಿದಿದೆ.

ವ್ಯವಸಾಯದ ಕ್ಷೇತ್ರದಲ್ಲಿ ನಮ್ಮ ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನೆಗಳ ಪರಿಣಾಮವಾಗಿ ಇಂದು ನಾವು ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿಗಳೂ ಮತ್ತು ಸ್ವಪರಿಪೂರ್ಣರೂ ಆಗಿದ್ದೇವೆ. ಇಂದು ನಾವು ಬರಗಾಲ, ಪ್ರವಾಹದಂತಹ ಪ್ರಕೃತಿ ವಿಕೋಪಗಳ ಸಮಯದಲ್ಲೂ ಕಂಗೆಡದಂತೆ ಅವುಗಳನ್ನು ಎದುರಿಸುವಷ್ಟು ಆಹಾರ ಧಾನ್ಯ ಸಂಗ್ರಹದಲ್ಲಿ ಸಮರ್ಥರಾಗಿದ್ದೇವೆ. ಇದರೊಂದಿಗೆ ನಾವು ಆಹಾರ ಧಾನ್ಯವನ್ನು ರಫ್ತು ಮಾಡುವ ಸ್ಥಿತಿಯಲ್ಲಿದ್ದೇವೆ. ಇದಕ್ಕೆಲ್ಲಾ ಕಾರಣ ನಮ್ಮ ವೈಜ್ಞಾನಿಕ ಸಂಶೋಧನೆ ಮತ್ತು ನಮ್ಮ ರೈತರು ನಮ್ಮ ತಂತ್ರಜ್ಞಾನದಲ್ಲಿ ಇಟ್ಟಿರುವ ನಂಬಿಕೆ ಹಾಗೂ ಅದರ ಸದುಪಯೋಗದಿಂದ ಸಾಧ್ಯವಾಯಿತೆಂದು ತಿಳಿಯಬಹುದು. ಆದರೂ ಈ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಪದ್ಧತಿಗಳು ಬಿಟ್ಟುಹೋಗಿಲ್ಲ. ಈ ಬಗೆಯ ಅತ್ಯಾಧುನಿಕ ತಂತ್ರಜ್ಞಾನ ಹೊಂದಿ ದೇಶದ ಅಭಿವೃದ್ದಿ ಸಾಧನೆಗೆ ನೆರವಾಗುತ್ತಿದ್ದರೂ ಸಾಧಿಸಬೇಕಾದುದು ಇನ್ನೂ ಎಷ್ಟೋ ಇವೆ. ನಮ್ಮ ಪ್ರಯೋಗಗಳು, ಸಂಶೋಧನೆಗಳು ಯುವ ಮನಸ್ಸುಗಳನ್ನು ತಲುಪುವುದು ಅತಿ ಮುಖ್ಯವಾದುದು. ದೈನಂದಿನ ಜೀವನದಲ್ಲಿ ಯುವಕರ ಬದುಕನ್ನು ಹಸನು ಮಾಡುವುದೇ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಮೂಲ ಉದ್ದೇಶ ಅಂದರೆ ತಪ್ಪಾಗಲಾರದು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಯುವಕರು ತಿಳಿಯಬೇಕು, ಮೌಢ್ಯದ ಕಡೆಗೆ ತಮ್ಮನ್ನು ತಾವು ಕೊಂಡೊಯ್ಯಲಾಗುವುದು. ಯುವಕರು ತಮ್ಮ ಕೈ-ಕಾಲುಗಳನ್ನು ಬಳಸಿ ಶ್ರಮ ಪಡಬೇಕಾಗಿಲ್ಲ ಇಂದು ಮೊಬೈಲಲ್ಲಿ ಎಲ್ಲವೂ ಸಾಧ್ಯ . ಒಂದು ಬಟನ್ ಒತ್ತಿದರೆ, ಉಡುಪು ತಮ್ಮಲ್ಲಿಗೆ ಬರುತ್ತದೆ. ಇನ್ನೊಂದು ಬಟನ್ ಒತ್ತಿದರೆ ನ್ಯೂಸ್ ಪೇಪರ್ ಬರುತ್ತದೆ,ಮೂರನೆಯ ಬಟನ್ ಒತ್ತಿದರೆ, ಕಾರು ಅವರಿಗಾಗಿ ಕಾಯುತ್ತಿರುತ್ತದೆ. ಹೀಗೆ ಕರೆಂಟ್ ಬಿಲ್ಲು, ಹಾಲಿನ ಬಿಲ್ಲು, ನೀರಿನ ಬಿಲ್ಲು ವ್ಯವಹಾರಗಳು ಎಲ್ಲವನ್ನು ಕೂತಲ್ಲೇ ಮಾಡಬಹುದು ಯುವಕರು ತಂತ್ರಜ್ಞಾನವನ್ನು ಚಟದಂತೆ ಅಂಟಿಸಿಕೊಂಡಿದ್ದಾರೆ, ವಿಜ್ಞಾನ,ತಂತ್ರಜ್ಞಾನ ನಮ್ಮನ್ನು ಅಗಾಧವಾಗಿ ವ್ಯಾಪಿಸಿಕೊಂಡಿದೆ. ಚಾರ್ಲ್ಸ್ ಡಾರ್ವಿನ್ ಎಂಬ ವಿಜ್ಞಾನಿಯೂ ಸಸ್ಯ ಮತ್ತು ಪ್ರಾಣಿಗಳ ಜೀವನವನ್ನು ಎಚ್ಚರಿಕೆಯಿಂದ ಪರೀಕ್ಷಿಸಿದ ಅಲ್ಲದೆ ಜೀವಿಗಳ ಒಂದು ಸಂತತಿಯಿಂದ ಇನ್ನೊಂದಕ್ಕೆ ಆಗುವ ಬದಲಾವಣೆಗಳನ್ನು ಪರಿಗಣಿಸಿದ ಇವೆಲ್ಲದರ ಆಧಾರದ ಮೇಲೆ ಈ ವಿಶ್ವ ಒಂದು ದಿನದಲ್ಲಾಗಲಿ ಏಳು ದಿನದಲ್ಲಾಗಲಿ ಸೃಷ್ಟಿಯಾಗಲಿಲ್ಲ ಎಂದು ಹೇಳಿದ ಅನೇಕ ಉದಾಹರಣೆಗಳನ್ನು ಕೊಟ್ಟು ಸಸ್ಯಗಳು ಪ್ರಾಣಿಗಳು ಮನುಷ್ಯರು ಹೀಗೆಯೇ ಇರಲಿಲ್ಲ ಒಂದು ಪೀಳಿಗೆಯಿಂದ ಇನ್ನೊಂದಕ್ಕೆ ಸ್ವಲ್ಪ ಸ್ವಲ್ಪವಾಗಿ ಬದಲಾಯಿಸುತ್ತಾ ಹಂತ ಹಂತವಾಗಿ ಈಗಿನ ರೂಪಕ್ಕೆ ಬಂದರು ಎಂದು ಸಾಧಿಸಿ ತೋರಿಸಿದ ಅಷ್ಟೇ ಅಲ್ಲ ಸಸ್ಯಗಳು ಪ್ರಾಣಿಗಳು ಪಕ್ಷಿಗಳು, ಮನುಷ್ಯರು ನಿಧಾನವಾಗಿ ಹೀಗಿರುವ ರೂಪಕ್ಕೆ ಬರುವುದಕ್ಕೆ ಕೋಟಿ ಕೋಟಿ ವರ್ಷಗಳು ಬೇಕಾದವು ಎಂಬುದನ್ನು ತೋರಿಸಿಕೊಟ್ಟ ಅವನ ಈ ವಾದವನ್ನು ವಿಕಾಸವಾದ ಎಂದು ಕರೆಯುತ್ತೇವೆ, ಈ ವಾದವನ್ನು ಈಗ ಜಗತ್ತಿನ ಎಲ್ಲಾ ವಿಜ್ಞಾನಿಗಳು ವಿಚಾರವಂತರು ಒಪ್ಪಿಕೊಂಡಿದ್ದಾರೆ ಈ ಸಂಗತಿಗಳನ್ನು ಯುವಕರಿಗೆ ಪ್ರದರ್ಶನಗಳ ಮೂಲಕ ವಿಚಾರ ಮುಟ್ಟಿಸುವ ಕೆಲಸ ಜರೂರಾಗಿ ನಡೆಯಬೇಕಿದೆ.ಪರಮಾತ್ಮನು ತಲೆಯಿಂದ ಕೆಲವರನ್ನು ತೋಳುಗಳಿಂದ ಕೆಲವರನ್ನು ತೊಡೆಗಳಿಂದ ಕೆಲವರನ್ನು ಪಾದಗಳಿಂದ ಕೆಲವರನ್ನು ಸೃಷ್ಟಿಸಿದ ಎಂಬ ನಮ್ಮ ಪುರಾಣಗಳನ್ನು ಬದಿಗೆ ಸರಿಸಿ, ಭೂಮಿ ಸೂರ್ಯನ ಸುತ್ತ ಸುತ್ತುತ್ತದೆಯೇ ಹೊರತು ಸೂರ್ಯ ಭೂಮಿ ಸುತ್ತೋದಿಲ್ಲ ಎಂಬುದನ್ನ ಯುವಕರಿಗೆ ಮನವುಟ್ಟುವಂತೆ ಹೇಳಬೇಕು, ಗೆಲಿಲಿಯೋ ಎಂಬ ಇಟಲಿ ದೇಶದ ವಿಜ್ಞಾನಿ ದೂರದರ್ಶಕದ ಸಹಾಯದಿಂದ ನಕ್ಷತ್ರ ಲೋಕವನ್ನು ಗ್ರಹಗಳನ್ನು ಅವಲೋಕಿಸಿದ ಯುವಕರಿಗೆ ಮುಟ್ಟಿಸಬೇಕು.ಎಲ್ಲರಿಗೂ ಹಿತ ನೀಡುವ ವಿಜ್ಞಾನ ತಂತ್ರಜ್ಞಾನಗಳತ್ತ ಸಾಗಬೇಕು, ಮೊದಲು ಮಾನವನಾಗಬೇಕು, ಭೂಮಿಯ ಮೇಲಿನ ಸಕಲ ಜೀವಿಗಳ ಬಗ್ಗೆ ಪ್ರೀತಿ ತೋರುವುದನ್ನು ಬೆಳಸಿಕೊಳ್ಳಬೇಕು.ನಮ್ಮ ಇಂದಿನ ಎಲ್ಲ ಸಂಪನ್ಮೂಲ ಮುಂದಿನ ಪೀಳಿಗೆ ನಮಗಿತ್ತಿರುವ ಕೊಡುಗೆ, ಅದನ್ನು ಹಾಳುಗೆಡವದೇ ಇನ್ನಷ್ಟು ಉತ್ತಮವಾಗಿ ಅವರಿಗೆ ದಾಟಿಸುವುದು ನಮ್ಮ ಜವಾಬ್ದಾರಿ. ಈ ಸಂಪನ್ಮೂಲಗಳನ್ನು, ಹಿತಮಿತವಾಗಿ ಬಳಸುವುದಷ್ಟೇ ಅಲ್ಲದೇ ಅಭಿವೃದ್ಧಿ ಪಡಿಸುವುದನ್ನು ರೂಢಿಸಕೊಳ್ಳಬೇಕು. ಆದರೆ, ವಿಜ್ಞಾನ ಕಲಿತವರಲ್ಲಿಯೇ ಕೆಲವರು, ದೇಶ, ಜನಾಂಗಗಳನ್ನೇ ನಾಶಮಾಡುವ ತಂತ್ರಾಗಮದಲ್ಲಿ ತೊಡಗಿದ್ದಾರೆ. ಕೆ ಶಿವರಾಮಕಾರಂತರು ಹೇಳುವಂತೆ ”ಭಾರತದಲ್ಲಿ ವಾಸಿಸುವ ನಮಗೆ ಪರಿಸರವನ್ನು ಕುರಿತ ಜ್ಞಾನ ತೀರ ಕಡಿಮೆ. ಪಶು ಪಕ್ಷಿಗಳಿಗೂ, ಮಾನವ ಬಳಗಕ್ಕೂ ಏನು ಸಂಬಂಧವಿದೆಯೆಂದು

ನಮಗಿನ್ನೂ ತಿಳಿದಿಲ್ಲ. ಆದರೂ ನಾವು ಬುದ್ಧನಿಂದ ಅಹಿಂಸಾ ಧರ್ಮದ ಬೋಧನೆ ಪಡೆದವರು! ನಮ್ಮ ಪುರಾತನ ಋಷಿಗಳು ಅತಿ ಸೂಕ್ಷ್ಮವಾದ ಜೀವಾಣುವಿನಲ್ಲಿಯೂ ಬ್ರಹ್ಮನಿದ್ದಾನೆ ಎಂದವರು. ಹೀಗೆ ಮತ ಧರ್ಮಗಳ ಪ್ರಭಾವ ನಮ್ಮ ಮೇಲೆ ವಿಪರೀತ ಬಿದ್ದುದರಿಂದಲೋ ಏನೋ. ಆ ಬ್ರಹ್ಮನನ್ನು ನಾವು ನಿಸರ್ಗದಲ್ಲಿ ಕಾಣಲು ಬಯಸುವುದಿಲ್ಲ! ಕಲಿಯುಗದಲ್ಲಿ ಬ್ರಹ್ಮನ ಬದಲು ದುಡ್ಡೇ ಸರ್ವಸ್ವ – ಎಂಬ ಆರಾಧನೆಗೆ ತೊಡಗಿದ್ದೇವೆ. ಪ್ರಕೃತಿ ಸಂಪತ್ತನ್ನು ನಾವು ಇಂದು ದೈನಂದಿನ ನಮ್ಮ ಲಾಭಕ್ಕಾಗಿ ಸುಲಿಯುತ್ತಿದ್ದೇವೆಯೇ ಹೊರತು, ನಾಳಿನ ಯೋಚನೆ ನಮಗಿಲ್ಲ ಎಂಬಂತೆ ವರ್ತಿಸುತ್ತಿದ್ದೇವೆ." ಆದ್ದರಿಂದ ವಿಜ್ಞಾನವನ್ನು ಸಕಲ ಜೀವರಾಶಿಯ ಒಳಿತಿಗಾಗಿ ಹೆಜ್ಜೆ ಇಡುವತ್ತ, ಬೆಳಕಿನತ್ತ ಸಾಗಿಸಬೇಕಿದೆ. ವಿಜ್ಞಾನ ತಿಳಿಸುವುದೇ ಎಲ್ಲಾ ಜೀವಿಗಳೊಡಗೂಡಿ ಬದುಕುವುದನ್ನು, ಪರಿಸರ ಸ್ನೇಹಿಯಾಗಿ ಬದುಕುವ ರೀತಿಯನ್ನು, ಸರಳ ಸಮೃದ್ಧಿ ಜೀವನವನ್ನು ಹಾಗೂ ನೆಮ್ಮದಿಯಾಗಿ ಸಹಬಾಳ್ವೆ ನಡೆಸುವುದನ್ನು. ನಡೆಸುವುದನ್ನು. ವಿಜ್ಞಾನ ಬೋಧಿಸುವುದು ನೀನೂ ಬದುಕು, ಇತರ ಜೀವಿಗಳನ್ನು ಬದುಕಲು ಬಿಡು. ಪ್ರಸ್ತುತ ಸಮಾಜ ವಿಜ್ಞಾನ ಹಾಗೂ ತಂತ್ರಜ್ಞಾನದ ಜಗತ್ತಿನಲ್ಲಿ ಬದುಕುತ್ತಿದ್ದರೂ ಅತೀ ಕಡಿಮೆ ಕಡಿಮೆ ಜನರಿಗೆ ಇದರ ಬಗೆಗೆ ತಿಳಿವಳಿಕೆ ಇದೆ ಹೀಗಾಗಿ ವಿಜ್ಞಾನಿಗಳು ಹೊಸ ಸಂಶೋಧನೆಗಳನ್ನು ಜನರಿಗೆ ತಲುಪಿಸುವ ಬಹುದೊಡ್ಡ ಸವಾಲನ್ನು ಎದುರಿಸುತ್ತಿದ್ದಾರೆ ಇಂದು ಸಾಮಾನ್ಯ ಜನರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಸಮರ್ಪಕವಾದ ತಿಳಿವಳಿಕೆ ಇಲ್ಲ. ಇತ್ತೀಚೆಗೆ ಕೋವಿಡ್–19ನ್ನು ಎದುರಿಸುವಲ್ಲಿ ನಮ್ಮ ಜನ ನಡೆದುಕೊಂಡ ರೀತಿ ಕೂಡ ಭಯವನ್ನು ಹುಟ್ಟಿಸುತ್ತದೆ. ಇದು ಭವಿಷ್ಯದಲ್ಲಿ ಅತ್ಯಂತ ಅಪಾಯಕಾರಿ ಏಕೆಂದರೆ ಜನಸಾಮಾನ್ಯರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗೆ ಅರಿವು ಇಲ್ಲವೆಂದಾದರೆ ಭವಿಷ್ಯದಲ್ಲಿ ಜ್ವಲಂತ ಸಮಸ್ಯೆಗಳ ಕುರಿತಂತೆ ಜನರಿಗೆ ಪ್ರಜ್ಞೆಯೇ ಇಲ್ಲವೆಂದಾದರೆ ಭವಿಷ್ಯದಲ್ಲಿ ಕಾರ್ಮೋಡ ಕವಿಯಲಿದೆ ಎಂದೇ ಅರ್ಥ. ಆಲೋಚನೆ ಮಾಡದೇ ಮಾಹಿತಿ ವರ್ಗಾವಣೆ ಮಾಡುವಲ್ಲಿ ನಮ್ಮ ಜನ ನಿಪುಣರು.ಇದರಿಂದ ಸತ್ಯಕ್ಕಿಂತ ಹೆಚ್ಚಾಗಿ ಅಸತ್ಯವೇ ಹರಡುತ್ತಿದೆ.ಇಂಥ ಸಂಧರ್ಭದಲ್ಲಿ ಭವಿಷ್ಯದಲ್ಲಿ ಎದುರಾಗಬಹುದಾದ ಸವಾಲುಗಳನ್ನು ಹೇಗೆ ಬಗೆ ಹರಿಸಬೇಕು ಎಂಬುದು ವಿಜ್ಞಾನಿಗಳ ಸಮುದಾಯದ ಮುಂದೆ ಇರುವ ಬಹುದೊಡ್ಡ ಸವಾಲು. ಜನರನ್ನು ಸುಶಿಕ್ಷಿತಗೊಳಿಸುವುದೆಂದರೆ ಅದು ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗೆ ಮಾಹಿತಿ ಬಿತ್ತುವುದು ಹಾಗೂ ವೈಜ್ಞಾನಿಕ ಅಂಕಿ–ಅಂಶ ಕುರಿತಂತೆ ಜನರಲ್ಲಿ ಪ್ರಜ್ಞೆ ಮೂಡಿಸುವುದು ಎಂದೇ ಅರ್ಥ. ವಿಜ್ಞಾನಿಗಳ ಕೆಲಸ ಬಹುಮುಖ್ಯವಾಗಿರುವುದು ಕೇವಲ ಸಂಶೋಧನೆ, ಅನುಷ್ಠಾನ ಹಾಗೂ ಜ್ಞಾನದ ವರ್ಗಾವಣೆ ಮಾತ್ರವಲ್ಲ ಬದಲಾಗಿ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆಗಿರುವ ಸಂಶೋಧನೆಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮಾಡುವುದು ವಿಜ್ಞಾನಿಗಳ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಎಚ್.ನರಸಿಂಹಯ್ಯ ತಮ್ಮ 'ವಿಜ್ಞಾನ ಮತ್ತು ಸಮಾಜ' ಎಂಬ ಪ್ರಬಂಧದಲ್ಲಿ ವಿವರಿಸಿರುವಂತೆ "ವಿಜ್ಞಾನಿಗಳು ತಮ್ಮ ಸಂಶೋಧನೆಗಳನ್ನು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಬೇರೆ ಕೆಲವು ಕರ್ತವ್ಯಗಳನ್ನು ನಿರ್ವಹಿಸುವುದು ಅವಶ್ಯಕ. ವಿಜ್ಞಾನಿಗಳು ಹೆಚ್ಚಿನ ಶಿಕ್ಷಣವನ್ನು ಪಡೆದ ಧೀಮಂತರಾಗಿರುವುದರಿಂದ ಅವರು ತಮ್ಮ ಜ್ಞಾನವನ್ನು ಸಾಮಾನ್ಯ ವ್ಯಕ್ತಿಗಳ ಮನೋಭಾವವನ್ನು ತಿದ್ದುವ ಕಾರ್ಯದಲ್ಲಿ ಉಪಯೋಗಿಸಿ, ಸಮಾಜದ ಸುಧಾರಣೆಗೆ ಸಹಾಯಕರಾಗಬೇಕು. ವಿಜ್ಞಾನದ ಮತ್ತು ವೈಜ್ಞಾನಿಕ ಮಾರ್ಗಗಳು ಜನಪ್ರಿಯವಾಗುವಲ್ಲಿ ವಿಜ್ಞಾನಿಯ ಪ್ರಾಮುಖ್ಯ ಬಹಳ ಹಿರಿದಾದುದು. ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಾತೃಭಾಷೆಗಳಲ್ಲಿ, ಇಂಗ್ಲೀಷ್‌ನಲ್ಲಿ ಜನಪ್ರಿಯ ಲೇಖನಗಳನ್ನು ಬರೆಯುವುದು ಮತ್ತು ಉಪನ್ಯಾಸ ಕೊಡುವುದು ಈ ದಿಸೆಯಲ್ಲಿ ವಿಜ್ಞಾನಿಗಳು ಪ್ರಯತ್ನಿಸಬೇಕು. ವಿಜ್ಞಾನಿಯ ಮನೋಭಾವವು ಅವನು ದಂತಗೋಪುರದಲ್ಲಿರುವ ಅಪೂರ್ವ ಬುದ್ಧಿಶಾಲಿ ಎಂಬ ಭಾವನೆಯನ್ನು ಜನರಲ್ಲಿ ಉಂಟು ಮಾಡುವ ರೀತಿಯಲ್ಲಿ ಇರಬಾರದು. ಸಾಮಾನ್ಯ ಜನತೆ ವಿಜ್ಞಾನಿಯನ್ನು ವಿಶೇಷ ಜಾತಿಗೆ ಸೇರಿದ ಪ್ರಾಣಿ ಎಂದು ಅಂದುಕೊಳ್ಳುವಂತಾಗಬಾರದು ಮನೋಧರ್ಮವನ್ನು ಪಡೆದು ಕಾರ್ಯ ಪ್ರವೃತ್ತವಾದರೆ ಬಡತನದ ನಿರ್ಮೂಲನೆ, ಶೋಷಣೆಯ ನಾಶ ಸಾಧ್ಯ. ವಿಜ್ಞಾನಿಗಳು ತಮ್ಮ ಆತ್ಮ ಸಾಕ್ಷಿಗೆ ತಕ್ಕಂತೆ ಕಾರ್ಯನಿರ್ವಹಿಸುತ್ತಿರುವುದರಿಂದ ಜ್ಞಾನಕ್ಕೆ ಹಾಗೂ ಅದರ ಮಾರ್ಗಗಳಿಗೆ ಒಂದು ಬೆಲೆ ಸಿಕ್ಕಿದೆ ಯುವಕರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ನಂಬಿಕೆ ಇರಬೇಕು.ತಾವು ತರ್ಕಬದ್ಧವಾಗಿ ಧೈರ್ಯದಿಂದ ವರ್ತಿಸಿದಾಗ ಮಾತ್ರ ಸಮಾಜದ ಸುಧಾರಣೆ ಸಾಧ್ಯ. ಮೌಢ್ಯಕ್ಕೆ ಎಲ್ಲೆ ಇರುವುದಿಲ್ಲ. ಅದು ಪಾರ್ಥೇನಿಯಂ ಗಿಡದಂತೆ. ಒಂದು ಬೀಜ ಬಿತ್ತಿದರೆ ಕಾಡಿನಂತೆ ಹರಡುತ್ತದೆ. ನಿತ್ಯ ಮುಂಜಾನೆ ರಾಶಿಫಲ, ಗ್ರಹ ದೋಷಗಳ ಮೂಲಕ ಜನಸಾಮಾನ್ಯರಲ್ಲಿ ಮೌಢ್ಯ ಬಿತ್ತುತ್ತಿರುವ ಜ್ಯೋತಿಷಿಗಳು ಈ ಪಾರ್ಥೇನಿಯಂ ಬೀಜಗಳ ವಾರಸುದಾರರಾಗಿದ್ದಾರೆ. ಫಲಿತಾಂಶ ಒಂದೇ. ಜನರು ಮೌಢ್ಯಕ್ಕೆ ದಾಸರಾಗುತ್ತಾರೆ. ಗ್ರಹಣದ ಸಂದರ್ಭದಲ್ಲಿ ಕೆಲವೊಂದು ಮೂಢ ಆಚರಣೆಗಳನ್ನು ಜನಸಾಮಾನ್ಯರು ಮಾಡುತ್ತಾರೆ ಅದರಲ್ಲಿ ಒಂದು ಮೂಢ ಆಚರಣೆ ಎಂದರೆ ಅಂಗ ವೈಕಲ್ಯಕ್ಕೆ ತುತ್ತಾಗಿರುವ ಮಕ್ಕಳನ್ನು ತಿಪ್ಪೆಯಲ್ಲಿ ಹೂತಿದ್ದರೆ ಕಾಲುಗಳು ಸರಿಹೋಗುತ್ತವೆ ಎಂಬ ನಂಬಿಕೆಯಿಂದ ತಿಪ್ಪೆಯಲ್ಲಿ ಮಕ್ಕಳನ್ನು ಹೂತಿರುವುದು ಉತ್ತರ ಕರ್ನಾಟಕದ ಕೆಲವೊಂದು ಭಾಗದಲ್ಲಿ ಗಮನಿಸಿದ್ದೇವೆ. ಆದರೆ ಸಮಾಜದಲ್ಲಿ ಜ್ಯೋತಿಷಿಗಳು ಬಿತ್ತುತ್ತಿರುವ ಮೌಢ್ಯದಿಂದ ಜನರು ಹೊರಬರುವುದು ಅಷ್ಟು ಸುಲಭವಲ್ಲ.

ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ ಬಡತನವ
ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ ಬನ್ನಿ ಸೋದರರೆ ಬೇಗ ಬನ್ನಿ – ಕುವೆಂಪು

ಮೂಢನಂಬಿಕೆ ಆಚರಿಸುವಷ್ಟು ದೊಡ್ಡ ಮೂರ್ಖತನ ಬೇರೊಂದಿಲ್ಲ. ಆದರೆ ಹಿರಿಯರು ಹೇಳುವ ಕೆಲವೊಂದು ಆಚರಣೆಗಳು ಮೂಢನಂಬಿಕೆ ಅನಿಸಿದರೂ ಸೂಕ್ಷ್ಮವಾಗಿ ನೋಡಿದರೆ ಅವುಗಳ ಹಿಂದೆ ಒಂದು ವೈಜ್ಞಾನಿಕ ಕಾರಣವಿರುತ್ತವೆ. ಮೂಢನಂಬಿಕೆ ಅನುಸರಿಸುವಷ್ಟು ದೊಡ್ಡ ಮೂರ್ಖತನ ಬೇರೊಂದಿಲ್ಲ. ಆದರೆ ಹಿರಿಯರು ಹೇಳುವ ಕೆಲವೊಂದು ಆಚರಣೆಗಳು ಮೂಢನಂಬಿಕೆ ಅನಿಸಿದರೂ ಸೂಕ್ಷ್ಮವಾಗಿ ನೋಡಿದರೆ ಅವುಗಳ ಹಿಂದೆ ಒಂದು ವೈಜ್ಞಾನಿಕ ಕಾರಣವಿರುತ್ತವೆ. ಸಂಜೆಯಾದ ಬಳಿಕ ಉಗುರು ಕತ್ತರಿಸಬಾರದು ಹಿಂದೆ ವಿದ್ಯುತ್ ಬೆಳಕು ಇರಲಿಲ್ಲ, ಹರಿತವಾದ ನೈಫ್ , ಬ್ಲೇಡ್ ಬಳಸಿ ಉಗುರು ಕತ್ತರಿಸುತ್ತಿದ್ದರು. ಸಂಜೆಯಾದರೆ ಸರಿಯಾಗಿ ಕಾಣದೆ ಉಗುರಿಗೆ ಗಾಯವಾಗುವ ಸಾಧ್ಯತೆ ಇರುವುದರಿಂದ ಸಂಜೆ ಉಗುರು ಕತ್ತರಿಸಬಾರದು ಎಂದು ಹೇಳುತ್ತಿದ್ದರು. ಸಾವು ಮನೆಗೆ ಹೋಗಿ

ಬಂದರೆ ಸ್ನಾನ ಮಾಡಬೇಕು ದೇಹವನ್ನು ಸುಡುವಾಗ ಕೆಲವೊಮ್ಮೆ ಸೋಂಕು, ಬ್ಯಾಕ್ಟೀರಿಯಾ ಹರಡುವುದು, ಅಲ್ಲದೆ ಸ್ನಾನ ಮಾಡುವುದರಿಂದ ಮನಸ್ಸು ಫ್ರೆಶ್ ಆಗುವುದರಿಂದ ಸಾವು ಮನೆಗೆ ಹೋಗಿ ಬಂದರೆ ಸ್ನಾನ ಮಾಡಬೇಕೆಂದು ಹಿರಿಯರು ಹೇಳುತ್ತಾರೆ. ಮನೆ ಬಾಗಿಲಿಗೆ ನಿಂಬೆ ಹಣ್ಣು, ಮೆಣಸಿನಕಾಯಿಯ ತೋರಣ ಕಟ್ಟುವುದು ನಿಂಬೆಹಣ್ಣು ಹಾಗೂ ಹಸಿ ಮೆಣಸು ಕೀಟಾಣುಗಳನ್ನು ತಡೆಯುತ್ತವೆ, ಮನೆ ಬಾಗಿಲಿಗೆ ಕಟ್ಟಿದರೆ ಕೀಟಾಣುಗಳು ಒಳಗೆ ಬರುವುದಿಲ್ಲ. ರಾತ್ರಿ ಅರಳಿ ಮರದ ಬಳಿ ಹೋಗಬಾರದು ರಾತ್ರಿ ಹೊತ್ತು ಈ ಮರ ಇಂಗಾಲದ ಡೈ ಆಕ್ಸೈಡ್ ಬಿಡುಗಡೆ ಮಾಡುವುದರಿಂದ ಉಸಿರುಕಟ್ಟಿ ಸಾವು ಸಂಭವಿಸುವುದು, ಆದ್ದರಿಂದ ಮಲಗಬಾರದು ಎಂದು ಹೇಳುತ್ತಾರೆ. ಮುಟ್ಟಿನ ಸಮಯದಲ್ಲಿ ದೇವಾಲಯಕ್ಕೆ ಹೋಗಬಾರದು ಹಿಂದಿನ ಕಾಲದಲ್ಲಿ ದೇವಾಲಯಕ್ಕೆ ಬಹುದೂರ ನಡೆದುಕೊಂಡು ಹೋಗುತ್ತಿದ್ದರು, ಅಲ್ಲದೆ ಪೂಜೆ ಕಾರ್ಯಗಳಲ್ಲಿ ಭಾಗವಹಿಸಲು ಮಹಿಳೆಯರಿಗೆ ಆ ಸಮಯದಲ್ಲಿ ಅಷ್ಟೊಂದು ಚೈತನ್ಯವಿರುವುದಿಲ್ಲ. ಆದ್ದರಿಂದ ಮನೆಯಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳಲಿ ಎಂಬ ಉದ್ದೇಶದಿಂದ ಆಕೆ ಪೂಜೆಯಲ್ಲಿ ಭಾಗವಹಿಸಬಾರದು, ಅಡುಗೆ ಮನೆಗೆ ಬರಬಾರದು ಮುಂತಾದ ನಿಯಮಗಳನ್ನು ತಂದರು. ಆದರೆ ಕ್ರಮೇಣ ಮುಟ್ಟಿಗೆ ಮೈಲಿಗೆಯ ರೂಪ ನೀಡಿ ಆಕೆಯನ್ನು ದೂರ ಇಡಲಾರಂಭಿಸಿದರು. ವಸ್ತುಸಂಗತಿ ಮತ್ತು ತರ್ಕಗಳನ್ನು ನಿರಾಕರಿಸುವ ಮತ್ತು ಕೇವಲ ಮನುಷ್ಯನ ರಾಗಭಾವಗಳನ್ನು ಆಧರಿಸಿದ ನಂಬಿಕೆಗಳನ್ನು ನಾವೆಷ್ಟು ಮಾನ್ಯಮಾಡಬೇಕು? ಈಗ ನಮಗೆ ಎದುರಾಗುವುದು ಮನುಷ್ಯ ಕಾಲಾಂತರದಲ್ಲಿ ತನ್ನ ಜೊತೆಯಲ್ಲಿ ಉಳಿಸಿಕೊಂಡು ಬಂದ ಸಾವಿರಾರು ನಂಬಿಕೆಗಳು, ಇವುಗಳ ಸುತ್ತ ಇರುವ ಆಚರಣೆಗಳು. ನಂಬಿಕೆಗಳು ಉಳಿದಿರುವುದು ಹೊರಗೆ ಸಿಕ್ಕುವ ಪುರಾವೆಗಳಿಂದ ಅಲ್ಲ; ಅವುಗಳು ಉಳಿದಿರುವುದು ಒಳಬೆಳಕಿನ ಕಸುವಿನ ಮೇಲೆ. ಈ ನಂಬಿಕೆಗಳನ್ನು ಮಾನ್ಯ ಮಾಡಲು ಹೊರಟರೆ ಮೂಢನಂಬಿಕೆಗಳನ್ನು ದಾಟಿಕೊಂಡೇ ಹೋಗಬೇಕಾಗುತ್ತದೆ. ಮೂಢನಂಬಿಕೆ ಎನ್ನುವುದು ಯಾವುದೇ ಸಮಾಜವನ್ನು ಮುನ್ನಡೆಸಲಾರದು. ಈ ಎಚ್ಚರವೂ ಒಂದು ಸಮಾಜಕ್ಕೆ ಅಗತ್ಯ. ಆದರೆ ನಂಬಿಕೆ ಮತ್ತು ಮೂಢನಂಬಿಕೆಗಳನ್ನು ಗುರುತಿಸುವಾಗ ಸೂಕ್ಷ್ಮವಾದ ಅರಿವು ಅಗತ್ಯ. ನಂಬಿಕೆಗೂ, ಮೂಢನಂಬಿಕೆಗೂ ಅಂತರ ಇರುವುದನ್ನು ಗುರುತಿಸಿಕೊಂಡಾಗಲೆ ಸಮಾಜದ ನಡೆ ಸರಿಯಾದ ದಿಕ್ಕಿನಲ್ಲಿರಲು ಸಾಧ್ಯ. ಮೂಢನಂಬಿಕೆ ಎನ್ನುವುದು 'ಮುಂದುವರಿದ' ಸಮುದಾಯಗಳಲ್ಲಿ ಇಲ್ಲ, ಅದೆಲ್ಲ ಇರುವುದು 'ಹಿಂದುಳಿದ' ಬುಡಕಟ್ಟು ಸಮುದಾಯಗಳಲ್ಲಿ ಎಂಬ ನಂಬಿಕೆಯೊಂದು ಇದೆ. ಆದರೆ ಈ ನಂಬಿಕೆಗೆ ಯಾವ ಆಧಾರವೂ ಇಲ್ಲ ಎನ್ನಬಹುದು. ಬುಡಕಟ್ಟುಗಳು ಎಂದೂ ಮನುಷ್ಯ ಮನುಷ್ಯರ ನಡುವೆ ಮೇಲು–ಕೀಳು ಭಾವನೆಯನ್ನು ಹುಟ್ಟುಹಾಕುವುದಿಲ್ಲ. ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿದರೂ, ಅವುಗಳೊಂದಿಗೆ ಸಹಬಾಳ್ವೆ ನಡೆಸುವ ಅನೇಕ ತತ್ವಗಳನ್ನು ಪಾಲಿಸುವ ಗುಣ ಈ ಬುಡಕಟ್ಟು ಸಮುದಾಯಗಳಲ್ಲಿವೆ ಪ್ರಾಣಿಪಕ್ಷಿಗಳ ವರ್ತನೆಯನ್ನು ಸೂಕ್ಷ್ಮವಾಗಿ ತಿಳಿಯುವ ಮತ್ತು ಅವುಗಳ ಮುಕ್ತ ಬದುಕಿಗೆ ಹೆಚ್ಚು ಅಡಚಣೆಯನ್ನು ಉಂಟುಮಾಡದ ರೀತಿಯಲ್ಲಿ ನಡೆದುಕೊಂಡು, ಇಡೀ ಪರಿಸರವನ್ನು ಯಥಾಸ್ಥಿತಿ ಕಾಯ್ದುಕೊಳ್ಳುವ ಉದಾತ್ತಗುಣವನ್ನೂ ಬುಡಕಟ್ಟು ಸಮುದಾಯ ತೋರಿಸುತ್ತ ಬಂದಿವೆ.ಇಂಥ ಸಮುದಾಯದ ನಂಬಿಕೆಗಳು ಪಂಚಭೂತಗಳಿಗೆ ಮಾರಕವಲ್ಲ; ಸೂರ್ಯಚಂದ್ರರಿಗೂ ಮಾರಕವಲ್ಲ. ಇದೆಲ್ಲವನ್ನು ತಿಳಿಯುವ ಒಳಮನಸ್ಸು ನಾಗರಿಕ ಎಂದು ಕರೆದುಕೊಳ್ಳುವ ಜಗತ್ತಿಗೆ ಇರಬೇಕಾಗುತ್ತದೆ. ಸೂರ್ಯ ಮತ್ತು ಚಂದ್ರಗ್ರಹಣಗಳಿಗೆ ಸಂಭಂದಿಸಿದಂತೆ ಅನೇಕ ಮೂಢನಂಬಿಕೆಗಳಿವೆ. ಹಿಂದೂ ಪುರಾಣದ ಪ್ರಕಾರ, ಸೂರ್ಯ ಅಥವಾ ಚಂದ್ರಗಹಣದ ದಿವಸ ಸೂರ್ಯ ಅಥವ ಚಂದ್ರನನ್ನು ಒಬ್ಬ ರಾಕ್ಷಸ ನುಂಗುತ್ತಾನೆಂದು. ಆ ಕಾರಣದಿಂದ ಜನರಿಗೆ ಮನೆಯ ಒಳಾಂಗಣದಲ್ಲಿ ಉಳಿಯಲು ಹೇಳುತ್ತಾರೆ. ವಿಶೇಷವಾಗಿ ಗರ್ಭಿಣಿ ಹೆಂಗಸರು ತಮ್ಮ ಮಕ್ಕಳು ವಿಕಾರರೂಪದಿಂದ ಜನಿಸದಿರಲು ಮನೆಯ ಒಳಗಡೆಯೇ ಇರಲು ಹೇಳುತ್ತಾರೆ. ಹಾಗೂ ಗ್ರಹಣದ ಸಮಯದಲ್ಲಿ ಅಡುಗೆ ಮಾಡುವುದು ಮತ್ತು ಆಹಾರ ಸೇವಿಸುವುದು ಕೂಡ ನಿಷೇಧ. ಕೆಲವು ಪ್ರದೇಶಗಳಲ್ಲಿ ಗ್ರಹಣ ಕಾಲದಲ್ಲಿ ಎಲ್ಲಾ ತಿನ್ನುವ ಆಹಾರಗಳು ಕೆಡುವುದನ್ನು ತಡೆಯಲು ಅವುಗಳ ಮೇಲೆ ಒಂದೊಂದು ತುಳಸಿ ಎಲೆಯನ್ನು ಇಡುತ್ತಾರೆ. ದುರಾದೃಷ್ಟ ಶನಿವಾರ:ಶನಿವಾರವು ಸಾಮಾನ್ಯವಾಗಿ ಶನಿದೇವರ ದಿನವೆಂದು ಪರಿಗಣಿಸಲಾಗಿದೆ. ಶನಿ ದೇವರು ಬಹಳ ಉಗ್ರ ಮತ್ತು ಕೋಪಿಷ್ಟ ದೇವರೆಂಬ ನಂಬಿಕೆ. ಆದ್ದರಿಂದ ಶನಿವಾರದ ದಿವಸ ಪ್ರಯಾಣ ಬೆಳಸುವುದು ಅಶುಭವೆಂದು ಮತ್ತು ಯಾವ ಮಂಗಳಕರ ಸಮಾರಂಭವನ್ನು ಅಂದು ಮಾಡಬಾರದು ಎಂಬ ನಂಬಿಕೆ ಇದೆ ಭಾರತದಲ್ಲಿ ಇನ್ನೂ ಚಾಲ್ತಿಯಲ್ಲಿರುವ ಇನ್ನೊಂದು ವಿಷಾದಕರ ಮೂಢನಂಬಿಕೆಯೆಂದರೆ ವಿಧವೆಯರಿಗೆ ಸಂಭಂದಪಟ್ಟಿದ್ದು. ಕೆಲವು ಭಾಗಗಳಲ್ಲಿ ವಿಧವೆಯರನ್ನು ಪ್ರಾಣಿಗಳಿಗಿಂತಾ ಕೆಟ್ಟದಾಗಿ ಕಾಣುತ್ತಾರೆ. ವಿಧವೆಯರು ಯಾವ ಆಭರಣವನ್ನು ಧರಿಸಬಾರದು ಮತ್ತು ತಮ್ಮ ಜೀವನದ ಉಳಿದ ಭಾಗದಲ್ಲಿ ಬಿಳಿ ಉಡುಪನ್ನೇ ಧರಿಸಬೇಕು ಎಂದು ಭಾವಿಸಲಾಗಿದೆ. ಅವಳು ಯಾವುದೇ ಮಸಾಲೆ ಆಹಾರ ತಿನ್ನದೆ ಕೇವಲ ಸಸ್ಯಾಹಾರಿ ಆಹಾರಗಳನ್ನೇ ತಿನ್ನಬೇಕೆಂದು ಹೇಳುತ್ತಾರೆ. ಮೂಢನಂಬಿಕೆಗಳಲ್ಲಿ ಅತ್ಯಂತ ವಿಷಾದದ ಸಂಗತಿಯೆಂದರೆ ವಿಧವೆಯರ ಮುಖದರ್ಶನವೂ ಬಹಳ ದೊಡ್ಡ ಅಪಶಕುನವೆಂಬ ಭಾವನೆ ಇದೆ.

**ಉಪಸಂಹಾರ**

ಯುವಕರಿಗೆ ದೇವರು, ಭೂತ, ಪಿಶಾಚಿ, ಜಾತಿ ಮುಂತಾದ ವಿಷಯಗಳಲ್ಲಿ ಸುಳ್ಳು ಸುಳ್ಳು ಕಥೆಗಳನ್ನು ಹೇಳುವುದನ್ನು ಬಿಡಬೇಕು ವಿಜ್ಞಾನ ಮತ್ತು ವಿಚಾರ ಭಾವನೆಗಳನ್ನು ಯುವ ಮನಸ್ಸುಗಳಿಗೆ ತುಂಬುವ ಕೆಲಸ ಮಾಡಬೇಕು ಯುವಕರು ಮೂಢನಂಬಿಕೆಗಳಿಂದ ಪಾರಾಗಿ ವಿಚಾರವಾದಿಗಳಾಗಬೇಕು, ವಿಜ್ಞಾನಮತಿಗಳಾಗಬೇಕು ಹೊಸ ಹೊಸ ಜ್ಞಾನ ಶಾಖೆಗಳತ್ತ ತಮ್ಮನ್ನು ತಾವು ಕೊಂಡೊಯ್ಯುವ ಕೆಲಸ ಆಗಬೇಕು.

**ಪರಾಮರ್ಶನ ಗ್ರಂಥಗಳು**

1. ಕುವೆಂಪು ; ವಿಜ್ಞಾನ ದೃಷ್ಟಿ; ಬೆಂಗಳೂರು.
2. ಎಚ್.ನರಸಿಂಹಯ್ಯ; ವಿಜ್ಞಾನ ಮತ್ತು ಸಮಾಜ; ಬೆಂಗಳೂರು.
3. ಜಿ.ಎಚ್.ಶಿವರುದ್ರಪ್ಪ; ಶ್ರೀವಿಜ್ಞಾನಿಗೆ; ಬೆಂಗಳೂರು.
4. ದಿನಕರ ದೇಸಾಯಿ; ಬಿರುಗಾಳಿ; ಬೆಂಗಳೂರು.
5. https://kannada.boldsky.com
6. www. Wikipedia.com
7. www.wikipedia.com